**Misc. No.19/2017**
**P.W-1**

**( ದಿನಾಂಕ.24-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** ಶ್ರೀ.A.W.A ವಕೀಲರಿಂದ

ನನ್ನ ತಂದೆ ಹೆಸರು ಪಂಡಿತರಾವ ಎಂದರೆ ಸರಿ. ಅವರು 2009 ರಲ್ಲಿ ತೀರಿಕೊಂಡಿರುತ್ತಾರೆ. ನನಗೆ 3 ಜನ ಅಣ್ಣ-ತಮ್ಮಂದಿರು ಮತ್ತು 5 ಜನ ಅಕ್ಕ-ತಂಗಿಯರು ಇರುತ್ತಾರೆ. ನನ್ನ ಅಕ್ಕ ಸುಮಿತ್ರಾಬಾಯಿ ತೀರಿಕೊಂಡಿರುತ್ತಾಳೆ. ನನ್ನ ತಮ್ಮ ಶಶಿಕಾಂತ ಒಬ್ಬರೇ ಜೀವಂತ ಇರುತ್ತಾರೆ. ಉಳಿದವರು ತೀರಿಕೊಂಡಿರುತ್ತಾರೆ. ನನ್ನ ಅಣ್ಣ-ತಮ್ಮಂದಿರು ತೀರಿಕೊಂಡಿದ್ದು, ಅವರಿಗೆ ಮಕ್ಕಳಿರುತ್ತಾರೆ ಎಂದರೆ ಸರಿ. ನನ್ನ ತಂದೆಗೆ 100 ಎಕರೆ ಜಮೀನು ಅಂಬೇವಾಡಿ ಗ್ರಾಮದಲ್ಲಿ ಇರುತ್ತದೆ ಎಂದರೆ, ಸಾಕ್ಷಿ 40-45 ಎಕರೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಅಣ್ಣ-ತಮ್ಮಂದಿರು ಹಾಗೂ ನಮ್ಮ ನಡುವೆ ಇವತ್ತಿನವರೆಗೆ ವಾಟನಿ ಆಗಿಲ್ಲ ಎಂದರೆ ಸರಿ. ನನ್ನ ಗಂಡ ತೀರಿಕೊಂಡು 5 ವರ್ಷವಾಗಿರುತ್ತದೆ. ನನ್ನ ಗಂಡನಿಗೆ ಹಿರೊಳಿ ಗ್ರಾಮದಲ್ಲಿ ಜಮೀನುಗಳು ಮತ್ತು ಮನೆಗಳು ಇರುತ್ತವೆಂದರೆ ಸರಿ. ಅದರಲ್ಲಿ ಕೂಡಾ ಯಾವುದೇ ವಾಟನಿ ಆಗಿಲ್ಲ ಎಂದರೆ ಸರಿ.

ನನ್ನ ಗಂಡನ ಆಸ್ತಿಯಲ್ಲಿ ನನಗೆ ಪಾಲು ಇದೆ. ನನ್ನ ತಂದೆಯ ಆಸ್ತಿಯಲ್ಲಿ ನನಗೆ ಯಾವುದೇ ಪಾಲು ಇರುವುದಿಲ್ಲ. ನನ್ನ ಗಂಡನ ಆಸ್ತಿ ಸುಮಾರು 14 ಎಕರೆ ಜಮೀನು ಇರುತ್ತದೆ. ಅದರಲ್ಲಿ 9 ಎಕರೆ ನೀರಾವರಿ ಜಮೀನು ಇರುತ್ತದೆ. ಉಳಿದ ಜಮೀನು ಒಣಬೇಸಾಯ ಇದೆ ಎಂದು ನುಡಿಯುತ್ತಾರೆ.

**Misc. No.19/2017**
**P.W-1**

ಸದರಿ ನೀರಾವರಿ ಜಮೀನದಲ್ಲಿ ಕಬ್ಬು ಬೆಳೆ ಬೆಳೆಯುತ್ತೇವೆ ಎಂದರೆ ಸರಿ. ನಾನು ಅರ್ಜಿಯಲ್ಲಿ ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರುತ್ತೇನೆಂದು ಹೇಳಿರುತ್ತೇನೆಂದರೆ ಸರಿ. ನಾನು ಶ್ರೀಮಂತಳಾಗಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನ್ಯಾಯಾಲಯದ ಖರ್ಚು ಕೊಡುವ ಶಕ್ತಿ ಇದೆ ಎಂದರೆ ಸರಿ. ಮೊನ್ನೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ನ್ಯಾಯಾಲಯದ ಶುಲ್ಕವನ್ನು ಕೊಡುವ ಸಾಮರ್ಥ ಇದೆ ಎಂದರೆ, ಸಾಕ್ಷಿ ನನ್ನ ತಂಗಿ ಮನೆಯಲ್ಲಿ ಇರುತ್ತೇನೆಂದು ನುಡಿಯುತ್ತಾರೆ. ನಾನು ನನ್ನ ತಂಗಿಯ ಹಿಡಿತದಲ್ಲಿ ಇರುವುದಿಲ್ಲ. ನಾನು ನ್ಯಾಯಾಲಯಕ್ಕೆ ಬಂದು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**